ಶ್ರೀ ಎಚ್. ಸಿದ್ದವೀರಪ್ಪ.—ನಾನು ಕೈಗಾರಿಕಾ ಮಂತ್ರಿಯಾಗಿದ್ದಾಗ ಅದು ಚೆನ್ನಾಗಿ ರಾಭದಾಯಕವಾಗಿ ನಡೆಯುತ್ತಿತ್ತು. ಆ ಮೇಲೆ ಏನು ಅದಕ್ಕೆ ರೋಗ ಬಂತೋ ನನಗೆ ಗೊತ್ತಾಗಿಲ್ಲ ; ಅದರ ವಿವರ ನನ್ನ ಹತ್ತಿರ ಇಲ್ಲ. ಈಗ ಮಾರಾಟ ಮಾಡಿದ್ದಾರೆ. ಮಾರಾಟ ಮಾಡಿದ್ದನ್ನು ಪುನಃ ತೆಗೆದುಕೊಳ್ಳುವ ಸೆಲಹೆಯನ್ನು ಕೊಟ್ಟಿದ್ದಾರೆ. ಅವರಿಂದ ಅಂಥ ಆಫರ್ ಬಂದರೆ ನೋಡಬಹುದೇ ಹೊರತು, ಈಗ ಅದು ಖಾಸಗೀ ಕಂಪೆನಿಯೇ ಸರ್ಕಾರ ಕೇವಲ ಕೆಲವು ಷೇರುಗಳನ್ನು ಇಟ್ಟುಕೊಂಡಿದೆ. ಕಂಟ್ರೋಲಿಂಗ್ ಪವ್ವರ್ ಸರ್ಕಾರಕ್ಕೆ ಇಲ್ಲ.

MADAM SPEAKER.—Sri B. Satyanarayana Singh may put Question No. 162.

Siruguppa-Hatcholli Road

162. **Sri B. SATYANARAYANA SINGH** (Hospet).[On behalf of **SRI B. E. RAMAIAH** (Siruguppa)] ,—

Will the Minister for Public Works and Electricity be pleased to state :—

(*a*) whether the Siruguppa-Hatcholli road which connects Andhra Border was included in the State Budget since two years back ;

(*b*) if so, the reasons for not starting the work ;

(*c*) when it would be taken up ;

(*d*) the estimated cost of the said road ?

Sri H. M. CHANNABASAPPA (Minister for Public Works and Electricity).—

(*a*) Yes.

(*b*) For want of approval from the Government of India under the programme of "State Roads of Economics of Inter State Importance".

(*c*) After the receipt of approval from Government of India.

(*d*) Rs. 11.37 lakhs.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—(ಎ) ಉತ್ತರಕ್ಕೆ ಹೌದು ಎಂದು ಹೇಳಿದ್ದೀರಿ. ಒಂದು ರೋಡನ್ನು ತೆಗೆದುಕೊಳ್ಳಬೇಕೆಂದು ನಮ್ಮ ಆಯವ್ಯಯ ಪಟ್ಟಿಯಲ್ಲಿ ಸೇರಿಸಿದ್ದರೂ ಕಳೆದ ಎರಡು ವರ್ಷಗಳಿಂದಲೂ ಇದನ್ನು ತೆಗೆದುಕೊಂಡಿಲ್ಲ. ಆಮೇಲೆ (ಬಿ) ಗೆ ಉತ್ತರವಾಗಿ ಕೇಂದ್ರ ಸರ್ಕಾರದ ಒಪ್ಪಿಗೆ ಬಂದಿಲ್ಲವೆಂದು ಹೇಳಿದ್ದೀರಿ. ಇದು ಅಂತರ ರಾಜ್ಯ ಸಾರಿಗೆ ಸಂಪರ್ಕದ ರಸ್ತೆಯಾಗಿರುವುದರಿಂದ ಮತ್ತು ನಮ್ಮ ಆಯವ್ಯಯ ಪಟ್ಟಿಯಲ್ಲಿಯೂ ಬಂದಿರುವುದರಿಂದ ರಾಜ್ಯಸರ್ಕಾರದವರು ಇದಕ್ಕೆ ಖರ್ಚು ಮಾಡಿ ಪುನಃ ಕೇಂದ್ರ ಸರ್ಕಾರದಿಂದ ಹಣ ಬಂದರೆ ಅದನ್ನು ಭರ್ತಿಮಾಡಿಕೊಳ್ಳುತ್ತೀರಾ ?

† ಎಚ್. ಎಂ. ಚನ್ನಬಸಪ್ಪ.—ಕೇಂದ್ರ ಸರ್ಕಾರದವರು ಮಂಜೂರಾತಿ ಕೊಡುವವರೆಗೆ ಕಷ್ಟವಾಗುತ್ತದೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ರಾಜ್ಯ ಸರ್ಕಾರಕ್ಕೆ ಇದನ್ನು ಮಾಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಣದ ಅಭಾವ ಇದೆ.